# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ.

***ದಿನಾಂಕ 04/12/2020 ನೇ ಶುಕ್ರವಾರಅಪರಾಹ್ನ 12.30ಗಂಟೆಗೆ ಸಮಿತಿಯ ಸಭಾಂಗಣದಲ್ಲಿ ಸಮಿತಿಯಅಧ್ಯಕ್ಷರಾದ ಶ್ರೀ ಸಿ.ಎನ್. ಧರ್ಮಪ್ಪಇವರಅಧ್ಯಕ್ಷತೆಯಲ್ಲಿ ನಡೆದ ಸಮಿತಿಯಸಾಮಾನ್ಯಸಭೆಯ ನಡವಳಿಗಳು.***

| ಕ್ರ.ಸಂ. | ಹಾಜರಿ | ಕ್ರ.ಸಂ. | ಗೈರುಹಾಜರಿ |
|---|---|---|---|
| 1 | ಶ್ರೀ ಧರ್ಮಪ್ಪ ಸಿ.ಎನ್., ಅಧ್ಯಕ್ಷರು | 1 | ಶ್ರೀಮತಿ ಮಂಜುಳ, ಸದಸ್ಯರು |
| 2 | ಶ್ರೀ ಟಿ.ಜಿ. ಕುಮಾರ್, ಉಪಾಧ್ಯಕ್ಷರು | 2 | ಶ್ರೀ ಜಯಕುಮಾರ ಎಂ.ಸಿ., ಸದಸ್ಯರು |
| 3 | ಶ್ರೀ ಚಂದ್ರಶೇಖರ್‌ಕೆ.ಎಸ್., ಸದಸ್ಯರು | | |
| 4 | ಶ್ರೀ ಜಯರಾಮ, ಸದಸ್ಯರು | | |
| 5 | ಶ್ರೀಮತಿ ಪಾರ್ವತಮ್ಮ, ಸದಸ್ಯರು | | |
| 6 | ಶ್ರೀ ಶಶಿಧರ ಎನ್.ಈ.,ಸದಸ್ಯರು | | |
| 7 | ಶ್ರೀ ಶಶಿಕುಮಾರ್ ಹೆಚ್.ಸಿ., ಸದಸ್ಯರು | | |
| 8 | ಶ್ರೀ ಟಿ.ಎಸ್. ರುದ್ರಯ್ಯ, ಸದಸ್ಯರು | | |
| 9 | ಶ್ರೀ ನಾಗರಾಜನಾಯ್ಕ ಎ.ಸಿ., ಸದಸ್ಯರು | | |
| 10 | ಶ್ರೀಮತಿ ಡಿ.ಎನ್. ರೂಪ,ಸದಸ್ಯರು | | |
| 11 | ಶ್ರೀ ರೇಣುಕಾಪ್ರಸಾದ್, ಸದಸ್ಯರು | | |
| 12 | ಶ್ರೀ ಮಹಲಿಂಗಪ್ಪ,ಸದಸ್ಯರು | | |
| 13 | ಶ್ರೀ ದೇವರಾಜುಡಿ.ಜಿ., ಸದಸ್ಯರು | | |
| 14 | ಶ್ರೀ ಬಿ.ಆರ್. ಶ್ರೀಹರಿ, ಉಪ ನಿರ್ದೇಶಕರು, ಇಲಾಖಾ ಪ್ರತಿನಿಧಿ | | |

***ವಿಷಯ 1):*** ***ಸಮಿತಿಯ ಹಿಂದಿನ ಸಾಮಾನ್ಯ ಸಭೆ ದಿನಾಂಕ 21/09/2020 ಹಾಗೂ ಸಮಿತಿಯತುರ್ತು ವಿಶೇಷ ಸಭೆ ದಿನಾಂಕ 01/10/2020 ರ ನಡವಳಿಗಳನ್ನು ಓದಿ ಒಪ್ಪಿದಾಖಲಿಸುವ ವಿಚಾರ.***

ತೀರ್ಮಾನ: ದಿನಾಂಕ 21/09/2020 ರ ಸಮಿತಿ ಸಾಮಾನ್ಯ ಸಭೆ ಹಾಗೂ 01/10/2020 ರ ಸಮಿತಿಯ ತುರ್ತು ವಿಶೇಷ ಸಭೆಯ ನಡವಳಿಗಳನ್ನು ಓದಿ ಒಪ್ಪಲಾಯಿತು

***ವಿಷಯ 2):*** ***ಕೃಉಮಾಸ, ಅರಸೀಕೆರೆ – ಸೆಪ್ಟಂಬರ್ 2020 ಮತ್ತುಅಕ್ಟೋಬರ್ 2020 ನೇ ಮಾಹೆಗಳ ಜಮಾ–ಖರ್ಚಿನತಃಖ್ತೆಯನ್ನು ಪರಿಶೀಲಿಸಿ ಒಪ್ಪುವ ವಿಚಾರ.***

ತೀರ್ಮಾನ: ಸಮಿತಿಯ ಸೆಪ್ಟಂಬರ್ – 2020 ಮತ್ತು ಅಕ್ಟೋಬರ್– 2020 ರ ಮಾಹೆಗಳ ಜಮಾ ಮತ್ತು ಖರ್ಚು ವಿವರಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಸರ್ವಾನುಮತದಿಂದ ಒಪ್ಪಲಾಯಿತು.

| ಮಾಹೆ | ಜಮಾ | ಖರ್ಚು | ಉಳಿತಾಯ | ಕೊರತೆ |
|---|---|---|---|---|
| ಸೆಪ್ಟಂಬರ್ 2020 | 1,12,33,567 | 44,10,990 | 68,22,577 | – |
| ಅಕ್ಟೋಬರ್ 2020 | 19,01,665 | 88,95,940 | – | 69,94,275 |

***ವಿಷಯ 3):*** ***ಅರಸೀಕೆರೆ ಸಮಿತಿಯಜಾವಗಲ್, ಗಂಡಸಿ ಮತ್ತು ಜೆ.ಸಿ. ಪುರ ಉಪ ಮಾರುಕಟ್ಟೆಗಳ ಪರಿಷ್ಕೃತರೂಪುರೇಖಾ ನಕಾಶೆಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಅನುಮೋದನೆ ಪಡೆದುಕೊಳ್ಳುವ ವಿಚಾರ.***

ತೀರ್ಮಾನ: ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು. ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ ಕೃಮಾಇ/ಮಾಅಯೋ/790/2007-08 ದಿನಾಂಕ 13/09/2007 ರ ಸೂಚನೆಗಳನ್ವಯ ಹಾಜರಿದ್ದ ಇಲಾಖಾ ಅಭಿಯಂತರರ ಶಿಫಾರಸ್ಸಿನಂತೆ ಮೆ॥ ಯೂನಿಕಾನ್ ಕನ್ಸಲ್‌ಟೆಂಟ್ಸ್, ದಾವಣಗೆರೆ ಇವರಿಂದ ಗಂಡಸಿ, ಜಾವಗಲ್ ಮತ್ತು ಬಾಣಾವರ ಉಪ ಮಾರುಕಟ್ಟೆಗಳ ಗಣಕೀಕೃತ ನಕ್ಷೆಗಳನ್ನು ಸಿದ್ಧಪಡಿಸಿಕೊಂಡು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಳ್ಳಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 4): ಕೃಉಮಾಸ, ಅರಸೀಕೆರೆ – ಸಮಿತಿಯ ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣದ ಎನ್.ಜಿ.ಆರ್.ಜಿ. ಗೋದಾಮು ಸಂಖ್ಯೆ 15 ರ ಖಾತೆ ವರ್ಗಾವಣೆ ಮಾಡಿಕೊಡುವ ಬಗ್ಗೆ.***

ತೀರ್ಮಾನ: ಕೃಉಮಾಸ, ಅರಸೀಕೆರೆ – ಸಮಿತಿಯ ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಲೀಸ್-ಕಂ-ಸೇಲ್ ಆಧಾರದಲ್ಲಿ ದಿನಾಂಕ: 08/03/2010 ರಂದು ಹಂಚಿಕೆ ಮಾಡಲಾದ ಎನ್.ಜಿ.ಆರ್.ಜಿ. ಗೋದಾಮು ಸಂಖ್ಯೆ 15 ರಲ್ಲಿ ಮೆ॥ ಶ್ರೀ ಲಕ್ಷ್ಮಿ ಟ್ರೇಡರ್ಸ್ ನಾಮೆಯಲ್ಲಿ ವ್ಯವಹರಿಸುತ್ತಿದ್ದ ಶ್ರೀ ಜೆ.ಟಿ. ಸತ್ಯನಾರಾಯಣಶೆಟ್ಟಿರವರು ದಿನಾಂಕ: 25/11/2018 ರಂದು ನಿಧನ ಹೊಂದಿದ ಪ್ರಯುಕ್ತ ಅವರ ಉತ್ತರಾಧಿಕಾರಿಯಾದ ಶ್ರೀ ಜೆ.ಎಸ್. ರಘು ಬಿನ್ ಲೇಟ್ ಸತ್ಯನಾರಾಯಣಶೆಟ್ಟಿ ಇವರು ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಸಾರ್ವಜನಿಕರು/ ರೈತರು / ವರ್ತಕರು ಇವರುಗಳಿಂದ ಖಾತೆ ವರ್ಗಾವಣೆ ಕುರಿತು ಹೊರಡಿಸಿದ್ದ ಪ್ರಕಟಣೆಗೆ ಯಾವುದೇ ಆಕ್ಷೇಪಣೆಗಳು ಬಾರದೇ ಇರುವುದರಿಂದ ಹಾಗೂ ಸಮಿತಿಯ ಕಾನೂನು ಸಲಹೆಗಾರರು ಖಾತೆ ವರ್ಗಾವಣೆ ಮಾಡಬಹುದೆಂದು ಅಭಿಪ್ರಾಯ ನೀಡಿರುವುದರಿಂದ ಶ್ರೀ ಜೆ.ಎಸ್. ರಘು ಇವರ ಅರ್ಜಿಯನ್ನು ಪರಿಗಣಿಸಿ, ಜಾವಗಲ್ ಉಪ ಮಾರುಕಟ್ಟೆ ಯಲ್ಲಿರುವ ಎನ್.ಜಿ.ಆರ್.ಜಿ. ಗೋದಾಮು ಸಂಖ್ಯೆ 15 ಹಂಚಿಕೆಯಾಗಿ 10 ವರ್ಷ ಕಳೆಯದೇ ಇರುವುದರಿಂದ ಸದರಿ ಗೋದಾಮನ್ನು ದಿ: ಸತ್ಯನಾರಾಯಣ ಶೆಟ್ಟಿ ಅವರ ಹೆಸರಿನಿಂದ ಶ್ರೀ ಜೆ.ಎಸ್. ರಘು ರವರ ಹೆಸರಿಗೆ ಪ್ರಥಮ ಹಂಚಿಕೆ ಎಂದು ಪರಿಗಣಿಸಿ ಖಾತೆ ವರ್ಗಾವಣೆ ಮಾಡಿಕೊಡಲು ಸಕ್ಷಮ ಪ್ರಾಧಿಕಾರದ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 5): ಸಮಿತಿಗೆ ದಲ್ಲಾಲರ ಲೈಸೆನ್ಸ್ ಕೋರಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸುವ ವಿಚಾರ.***

ತೀರ್ಮಾನ: ಸಮಿತಿಗೆ ಹೊಸದಾಗಿ ಲೈಸೆನ್ಸ್‌ಕೋರಿ ಬಂದಿರುವ ಅರ್ಜಿಯನ್ನು ಪರಿಶೀಲಿಸಿ ಕೆಳಕಂಡಂತೆ ಪರವಾನಗಿಯನ್ನು ಮಂಜೂರು ಮಾಡಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

| ಕ್ರ.ಸಂ. | ಹೆಸರು ಮತ್ತು ವಿಳಾಸ | ಲೈಸೆನ್ಸ್ ವರ್ಗ | ಅವಧಿ |
|---|---|---|---|
| 1 | ಶ್ರೀ ಕಲ್ಲೇಶ್ವರ ಸ್ವಾಮಿ ಟ್ರೇಡರ್ಸ್, ಪ್ರೋ. ಹೆಚ್.ಜಿ. ತ್ರಿವೇಣಿ, ಅರಸೀಕೆರೆ | ದಲ್ಲಾಲರು | 2020-21 ರಿಂದ 2029-30 ನೇ ಸಾಲಿನವರೆಗೆ |

***ವಿಷಯ 6): ಅಧ್ಯಕ್ಷರಅಪ್ಪಣೆ ಮೇರೆಗೆ ಬರಬಹುದಾದಇತರೆ ವಿಷಯಗಳು:***

***ವಿಷಯ 6(1): ಮುಖ್ಯ ಮಾರುಕಟ್ಟೆ ಪ್ರಾಂಗಣದ ವಿವಿಧ ಬ್ಲಾಕ್‌ಗಳಲ್ಲಿನ ಬೀದಿ ದೀಪಗಳ ದುರಸ್ತಿ ವಿಚಾರ :***

ತೀರ್ಮಾನ: ವಿಷಯವನ್ನು ಪರಿಶೀಲಿಸಲಾಯಿತು. ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮಳೆ ಗಾಳಿಯಿಂದ ಬೀದಿ ದೀಪಗಳು ಹಾಳಾಗಿದ್ದು ತುರ್ತಾಗಿ ಬೀದಿ ದೀಪಗಳನ್ನು ಅಳವಡಿಸುವ ಹಾಗೂ ದುರಸ್ತಿ ಮಾಡಿಸುವ ಅವಶ್ಯಕತೆಯಿರುವುದರಿಂದ ರೂ.30,000/- ಗಳ ವೆಚ್ಚದ ಮಿತಿಯೊಳಗೆ ಅರ್ಹ ನೊಂದಾಯಿತ

ವಿದ್ಯುತ್ ಗುತ್ತಿಗೆದಾರರುಗಳಿಂದ ದರಪಟ್ಟಿಗಳನ್ನು ಆಹ್ವಾನಿಸಿ ನಿಯಮಾನುಸಾರ ದುರಸ್ತಿ ಕಾರ್ಯ ಕೈಗೊಳ್ಳತಕ್ಕದ್ದೆಂದು ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ6(2):*** ***ಸಮಿತಿಗೆ ಭದ್ರತಾ ಸಿಬ್ಬಂದಿ ಸೇವೆ ಒದಗಿಸಿರುವ ಏಜೆನ್ಸಿದಾರರಾದ ಶ್ರೀ ಜಗದೀಶ್ ಟ್ರೇಡಿಂಗ್ ಕಂಪನಿ, ಅರಸೀಕೆರೆ ಇವರ 5 ಜನ ಭದ್ರತಾ ಸಿಬ್ಬಂದಿಗಳು ಕಾರ್ಮಿಕ ನಿರೀಕ್ಷಕರು, ಅರಸೀಕೆರೆ ಇವರಲ್ಲಿ ಸಲ್ಲಿಸಿರುವ ದೂರಿನ ಮೇಲೆ ದಿನಾಂಕ 21/11/2020 ರ ನಿರೀಕ್ಷಣಾಟಿಪ್ಪಣಿ ಪರಿಶೀಲಿಸಿ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ವಿಷಯವನ್ನು ಪರಿಶೀಲಿಸಲಾಯಿತು. ಕಾರ್ಮಿಕ ನಿರೀಕ್ಷಕರು, ಅರಸೀಕೆರೆ ಇವರ ನಿರೀಕ್ಷಣಾ ಟಿಪ್ಪಣಿಯಲ್ಲಿನ ನ್ಯೂನತೆಗಳ ಕುರಿತಂತೆ ಸೂಕ್ತ ಸಮಜಾಯಷಿ ಸಲ್ಲಿಸಲು ಶ್ರೀ ಜಗದೀಶ್ಟ್ರೇಡಿಂಗ್ ಕಂಪನಿ, ಅರಸೀಕೆರೆ, ಭದ್ರತಾ ಸಿಬ್ಬಂದಿ ಏಜೆನ್ಸಿದಾರರು ಇವರಿಗೆ ಸೂಚನೆ ನೀಡಿರುವುದಲ್ಲದೆ ಮಾನ್ಯ ನಿರ್ದೇಶಕರ ಸುತ್ತೋಲೆ ಸಂಖ್ಯೆಕೃಮಾಇ/ಮುಂಪ/46/2020–21 ದಿನಾಂಕ 13/10/2020ರನ್ವಯ ಶೇ. 50 ರಷ್ಟು ಭದ್ರತಾ ಸಿಬ್ಬಂದಿಗಳನ್ನು ಕಡಿತಗೊಳಿಸಿರುವುದು ಸಮಂಜಸವಾಗಿದ್ದು ಇನ್ನು ಮುಂದೆಯೂ ಸಹ ಮಿತಿಗೊಳಿಸಲ್ಪಟ್ಟ ಭದ್ರತಾ ಸಿಬ್ಬಂದಿಗಳ ಹಾಜರಾತಿ, ಕಾರ್ಯಕ್ಷಮತೆ, ಅವರಿಗೆ ಸಲ್ಲಬೇಕಾದ ಪಿ.ಎಫ್., ಇನ್ನಿತರೆ ಸೌಲಭ್ಯಗಳು ಸಮರ್ಪಕವಾಗಿ ಸಿಗುವಂತೆ ಸೂಕ್ತ ಕ್ರಮ ಕೈಗೊಳ್ಳಲು ಕಾರ್ಯದರ್ಶಿಯವರಿಗೆ ಸೂಚಿಸಿ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ಸಹಿ/–
**(ಬಿ.ಆರ್. ಶ್ರೀಹರಿ)**
ಕಾರ್ಯದರ್ಶಿ (ಪ್ರ),
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಅರಸೀಕೆರೆ.

ಸಹಿ/–
**(ಸಿ.ಎನ್. ಧರ್ಮಪ್ಪ)**
ಅಧ್ಯಕ್ಷರು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಅರಸೀಕೆರೆ.